ಅತ್ತ ಹಳ್ಳಿಯ ದಾರಿಯಲ್ಲಿ ಬೇರೆಯದೇ ರಾಗ.

ಬೆಳೆದಿದೆ ಪೈರು ಕೊಯ್ಯುವರಿಲ್ಲ, ಒಲಿತಿದೆ ತೆನೆ ಮೊಗೆವವರಿಲ್ಲ, ಹನಿಗಳಿಗಾಗಿ ಕಾಯುವರಿಲ್ಲ, ಬಾವಿಯ ಮಣ್ಣನು ತೆಗೆಯುವುದಿಲ್ಲ. – ಬೇಸರದ ತೋಡಿ ರಾಗದಲ್ಲಿ ಚಿಟ್ಟೆಗಳು ಹಾಡ ಶುರು ಮಾಡಿವೆ. ಈ ಲಲತ್, ಮಾಲಕೌಂಸ್ ರಾಗವನ್ನೇ ಕೇಳಿ ಕೇಳಿ ಮಳೆಮಾಯಿ ಮುದುರಿ ಕುಳಿತಿದ್ದಾಳೆ...

ಮರಳೆಂಬ ಹಾಸುಗೆ ಇಲ್ಲದೆ ಗಾಯಗೊಂಡಿದೆ ನದಿ. ಅಂತಹ ನದಿ ತುಂಬುವುದೇ ಇಲ್ಲ. ಪ್ರವಾಹ ಬಾರದೇ ಹೊಲಗಳ ತುಂಬಾ ಕಳೆಗಳು ತುಂಬಿವೆ. ಕೃಷಿ ಕಾಯಕದ, ವಿಶಾಲ ಪಡಸಾಲೆಯ ಬೃಹತ್ ಮನೆಗಳಲ್ಲಿ ಒಂಟಿ ವೃದ್ಧರು. ಜೋರು ಮಳೆಯ ನೋಡಿ ಕಂಗಾಲಾಗುತ್ತಿದ್ದಾರೆ. ಮಳೆ ಸುರಿದರೂ ಬೆಳೆ ಬೆಳೆಯಲು ಸಾಧ್ಯವಾಗದೆಂದು, ಈ ಮಳೆಯಲ್ಲಿ ಇಷ್ಟು ಬಿಸಿನೀರು ಕಾಯಿಸಲು ಮಗನಿಲ್ಲವೆಂದು ನಿಟ್ಟುಸಿರಿಡುತ್ತಿದ್ದಾರೆ.

★★★

ಆಗ

ಓ... ಅಕೋ ಅಲ್ಲಿ...

ಭೂಮಿಯಲ್ಲಿ ಒಂದು ವಿಶಾಲವಾದ ಬಯಲು. ಮಕಮಲ್ಲಿನಂತಿದೆ ಹಸಿರು ಹಾಸು. ಅದರ ಮೇಲೆ ಬೆಳ್ಳನೆಯ ಪಾದಗಳನ್ನು ಊರಿಕೊಂಡು, ಅಂಬೆಗಾಲಿಕ್ಕಿಕೊಂಡು ಪುಟ್‌ಪುಟಾಣಿ ಕಂದಮ್ಮಗಳು ಸೇರಿದ್ದಾವೆ. ಭಾಷೆ, ಧರ್ಮದ ಹಂಗಿಲ್ಲದೆ, ತೊದಲು ಮಾತಿನಲ್ಲಿ ಏನೋ ಮಾತಾಡಿಕೊಳ್ಳುತ್ತಿದ್ದಾರೆ. ಸಭೆಯೆಂಬ ಒಪ್ಪ ಓರಣವಿಲ್ಲ. ಗತ್ತು ಗೈರತ್ತುಗಳಿಲ್ಲ. ತೊದಲು ಭಾಷೆಯೆಂದರೆ ದೇವಭಾಷೆಯೇ ಸೈ. ಆದರೆ ಎಲ್ಲ ಪುಟಾಣಿಗಳೂ ತಮ್ಮದೇ ಅಪ್ಪ ಅಮ್ಮಂದಿರ ವಿರುದ್ಧ ತಿರುಗಿ ಬಿದ್ದಿದ್ದಾರೆ. ಅಪ್ಪ ಅಮ್ಮಂದಿರ ವಿರುದ್ಧವೇ ಪ್ರತಿಭಟನೆ, ಖಂಡನೆ. ಅವರ ತೊದಲು ಮಾತುಗಳನ್ನು ಪಾತರಗಿತ್ತಿಗಳು ಆಲಿಸುತ್ತಿವೆ. ಅವರು ಹೇಳುತ್ತಿದ್ದಾರೆ: ನಮಗೊಂದಿಷ್ಟು ನೀರು ಉಳಿಸಿ, ಒಂಚೂರು ಒಳ್ಳೆಯ ಗಾಳಿ ಕೊಡಿ. ಒಪ್ಪೊತ್ತಿನ ಊಟವನ್ನಾದರೂ ಉಳಿಸಿ...

ಆ ಮೇಘಮಲ್ಹಾರ ಕೇಳಿ ಮಳೆಮಾಯಿ ಕಣ್ಣಲ್ಲಿ ಮಿಂಚು.

ಇನ್ನೇಕೆ ತಡ... ದೇವಭಾಷೆಯ ಆಲಾಪನೆಯೇ ಸಾಕಲ್ಲ ತೆರಳಲು... ಹಸಿರು ಪತ್ತಲ ಉಟ್ಟು ಸವಾರಿ ಹೊರಟೇಬಿಟ್ಟಳು ಮಳೆ ಮಹಾರಾಜ್ಞಿ ಭೂಮಿಯೆಡೆಗೆ.

## ಕೋಡಿಬೆಟ್ಟು ರಾಜಲಕ್ಷ್ಮಿ

ಪತ್ರಕರ್ತೆ ರಾಜಲಕ್ಷ್ಮಿ ಮಂಗಳೂರಿನವರು. 'ಒಂದು ಮುಷ್ಟಿ ನಕ್ಷತ್ರ' (ಕಥಾಸಂಗ್ರಹ), 'ಅಮ್ಮನ ಜೋಳಿಗೆ' (ಪ್ರಬಂಧ ಸಂಗ್ರಹ) – ಅವರ ಪ್ರಕಟಿತ ಪುಸ್ತಕಗಳು. ಅವರು ತಮ್ಮ ಕವಿತೆಗಳ ಮೂಲಕವೂ ಓದುಗರ ಭಾವಲೋಕವನ್ನು ಮುಟ್ಟಿದ್ದಾರೆ.